ಮಣ್ಣನ್ನು ಉಪಯೋಗಿಸಿ ಕೈಕರಣ ಮಾಡಿಸಿದ್ದ. ಈಗ ಇಬ್ಬರೂ ಮನೆಯತ್ತ ಹೋಗುತ್ತಿದ್ದಾರೆ. ಆಗ ರಾತ್ರಿ ಒಂದು ಗಂಟೆ. ರುದ್ರನಾಗ ಅಂದುಕೊಂಡ. ತಂಗಿಗೆ ಹೆರಿಗೆಯ ಸಮಯ. ನಾನು ಅವಳ ಜೊತೆಯೇ ಇರಬೇಕು.

ಎರಡು ದಾರಿಗಳು ಕವಲೊಡೆದಿವೆ. ಈಗ ಗುರು ಶಿಷ್ಯ ಬೇರೆ ಬೇರೆ ಕಡೆ ಹೊರಟರು. ಕಾಡಿನ ರಸ್ತೆಯ ಕತ್ತಲಿನ ಪ್ರಯಾಣ.

ಇಬ್ಬರ ಕೈಗಳಲ್ಲಿ ಸೀಮೆಎಣ್ಣೆ ಲ್ಯಾಟೀನು ಇದೆ. ರುದ್ರನಾಗ ಆತುರದಿಂದ ನಡೆಯುತ್ತಿದ್ದಾನೆ. ಅವನಿಗೆ ಮುಂದೆ ಎಂಥ ದೃಶ್ಯ ಕಾಣುತ್ತದೆ ಎಂಬ ಕಲ್ಪನೆ ಇರಲಿಲ್ಲ. ಅದು ಹೊಂಗೆ ಗುಡ್ಡದ ತಪ್ಪಲು. ಗುಡ್ಡದ ತಪ್ಪಲಿನ ಕಡೆ ತೋಳವೊಂದು ಹೋಗುತ್ತಿರುವುದನ್ನು ಕಂಡ ಮದಂತ. ಅದರ ಬಾಯಲ್ಲಿ ಮಗು. ತೋಳ ಮಗು ಎತ್ತಿಕೊಂಡು ಬಂದಿದೆ. ಅರೆಗಳಿಗೆ ಸಹ ತಡಮಾಡಲಿಲ್ಲ ಮದಂತ. ಅವನು ತನ್ನ ಕೈಯಲ್ಲಿದ್ದ ಮಂತ್ರದಂಡವನ್ನು ರಭಸದಿಂದ ಎಸೆದ.

ನಾಲ್ಕು ಅಡಿಗಳ ಉದ್ದ ಮತ್ತು ಹಿಡಿಗಾತ್ರದ ದೊಣ್ಣೆಗೆ ತಲೆಬುರುಡೆಯನ್ನು ತಂತಿಯಿಂದ ಬಿಗಿದು ಕೂರಿಸಲಾಗಿತ್ತು. ಪ್ರಚಂಡ ವೇಗದಿಂದ ನುಗ್ಗಿತು. ತೋಳದ ತಲೆಗೆ ಬಡಿಯಿತು. ಮಗು ಬಾಯಿಂದ ನೆಲಕ್ಕೆ ಬಿದ್ದಿತು ಮದಂತ ಈಗ ಒಂದರ ಹಿಂದೆ ಮತ್ತೊಂದರಂತೆ ಕಲ್ಲುಗಳನ್ನು ತೂರಲಾರಂಭಿಸಿದ. ತೋಳ ಓಡಿಹೋಯಿತು. ಮದಂತ ಅಳುತ್ತಿದ್ದ ಮಗುವನ್ನು ಎತ್ತಿ ತನ್ನ ಎದೆಗೆ ಅದುಮಿಕೊಂಡ. ಅದರ ಕತ್ತು ಮತ್ತು ತೋಳಿನ ಮೇಲೆ ತೋಳದ ಹಲ್ಲಿನ ಗುರುತುಗಳು ಮೂಡಿದೆ. ಮಗು ನೋವಿನಿಂದ... ಚಳಿಯಿಂದ ಮತ್ತು ಹಸಿವಿನಿಂದ ಅಳುತ್ತಿದೆ.

ಮದಂತ ಸುತ್ತಲೂ ನೋಡಿದ. ಆದರೆ ಯಾರೂ ಸಹ ಕಂಡುಬರಲಿಲ್ಲ. ಅವನಿಗೆ ಏನು ಮಾಡಬೇಕು ಅಂತ ತಿಳಿಯಲಿಲ್ಲ. ಅಳುತ್ತಿರುವ ಮಗುವನ್ನು ಇವನು ಹೇಗೆ ತಾನೇ ಸುಧಾರಿಸಬಲ್ಲ? ಕೂಡಲೇ ಅವನಿಗೆ ಗುರು ಮಾಂತ್ರಿಕನ ಹೆಂಡತಿ ತುಂಗಮ್ಮ ನೆನಪಾದಳು.

ಸದ್ಯಕ್ಕೆ ಈ ಮಗು ಆ ತಾಯಿಯ ಹತ್ತಿರ ಇರಲಿ. ನಂತರ ಇದರ ವಾರಸುದಾರರನ್ನು ಪತ್ತೆ ಮಾಡಿದರಾಯಿತು ಎಂದುಕೊಂಡ. ಈಗ ಇವನು ಸಹ ಮಗುವನ್ನು ಎತ್ತಿಕೊಂಡು ಅತ್ತ ನಡೆಯುತ್ತಿದ್ದಾನೆ. ಅವನಿಗೂ ಸಹ ಅಲ್ಲಿ ಭಯಂಕರ ದೃಶ್ಯ ಕಾದಿತ್ತು. ಅದು ಮದಂತನ ಮನಸ್ಸಿನ ಮೇಲೆ ತೀವ್ರ ರೀತಿಯ ಪರಿಣಾಮ ಬೀರುವುದರಲ್ಲಿತ್ತು.

* * *

ಶ್ರೀಮಂತ ರಾಜಾರಾಯನ ಮನೆಯ ಬೈಕನ್ನು ಎತ್ತಿಕೊಂಡು ಬಂದಿದ್ದ ಮನೋಹರ. ಕಾರು ಕೆಟ್ಟು ನಿಂತಿದ್ದ ಜಾಗದತ್ತ ತುಂಬಾ ಸ್ಪೀಡಾಗಿಯೇ ಬೈಕ್‌ನಲ್ಲಿ ಬರುತ್ತಿದ್ದಾನೆ.

ದೇಹದಲ್ಲಿ ಭಯದ ಕಂಪನ ಉಂಟಾಗುತ್ತಿದೆ. ಹೋಗಬೇಕು... ನನ್ನ ಹೆಂಡತಿಯನ್ನು ಕರೆದುಕೊಂಡು ಇಲ್ಲಿಂದ ದೂರ ಹೋಗಬೇಕು. ಇಲ್ಲಿದ್ದರೆ ರುದ್ರನಾಗ ನನ್ನನ್ನು ಅಡ್ಡಡ್ಡ ಸಿಗಿದು ಎಸೆದು ಬಿಡುತ್ತಾನೆ. ಆಗ ಕೇಳಿಸಿತು. ಯಾರೋ ಕಿರುಚಿಕೊಳ್ಳುತ್ತಿದ್ದಾರೆ. ಆ ಧ್ವನಿಯನ್ನು ಪತ್ತೆ ಮಾಡಿದ. ಹೆಂಡತಿ ಕೂಗುತ್ತಿದ್ದಾಳೆ. ಅಯ್ಯೋ ಪಾಪ... ಹೆರಿಗೆ ನೋವನ್ನು ತಡೆಯಲಾರದೆ ಕಿರುಚಿಕೊಳ್ಳುತ್ತಿದ್ದಾಳೆ ಎಂದುಕೊಂಡ.

ಹತ್ತು ನಿಮಿಷ ಕಳೆಯಿತು. ಮನೋಹರ ಕಂಡಿದ್ದೇನು? ಕಾರಿನ ಡೋರ್ ತೆರೆದುಕೊಂಡಿದೆ. ತುಸು ದೂರದಲ್ಲಿ ನೆಲದ ಮೇಲೆ ಅವಳು ಬಿದ್ದಿದ್ದಾಳೆ. ಅವಳ ದೇಹವನ್ನು ಅಡಿಯಿಂದ ಕೊಚ್ಚೆಯ ನೀರು ನೆನೆಸುತ್ತಿದೆ. ಮೇಲಿನಿಂದ ಮಳೆಯ ನೀರು ಸುರಿಯುತ್ತಿದೆ. ಅವಳ ತೊಡೆಗಳ ನಡುವಿನಿಂದ ಈಗಲೂ ಸಹ ರಕ್ತಸ್ರಾವ ಆಗುತ್ತಿದೆ.

ಬೈಕನ್ನು ನಿಲ್ಲಿಸಿ ಹೆಂಡತಿಯ ಹತ್ತಿರ ಬಂದು ಅವಳನ್ನು ತಬ್ಬಿಕೊಂಡ. ಗಂಡನ ಮುಖ ನೋಡಿದ ಕೂಡಲೇ ದುಃಖ, ಭಯ ಮತ್ತು ಉದ್ವೇಗದಿಂದ ಕಂಪಿಸುವ ಸ್ವರದಲ್ಲಿ 'ರೀ... ರೀ... ನಮ್ಮ ಮಗುವನ್ನು ತೋಳ ಎತ್ತಿಕೊಂಡು ಹೋಯಿತು. ಹುಡುಕಿ... ಎಲ್ಲಾ ಕಡೆ ಹುಡುಕಿ' ಎಂದು ಬಡಬಡಿಸಿದಳು. ಈಗ ಅವಳಿಗೆ ಪ್ರಜ್ಞೆ ಹೋಯಿತು.

ಈಗಾಗಲೇ ನಡೆದಿರುವ ಘಟನೆಯಿಂದ ತತ್ತರಿಸಿ ಹೋಗಿದ್ದ ಮನೋಹರನಿಗೆ ಶಾಕ್ ಉಂಟಾಯಿತು. ತೋಳಕ್ಕೆ ಮಗು ಬಲಿಯಾಗಿರುವುದೇ? ಹುಡುಕಿದ... ಸುಮಾರು ಅರ್ಧ ಗಂಟೆಯ ಕಾಲ ಹುಡುಕಿದ. ಇಷ್ಟು ಹೊತ್ತಿನ ತನಕ ಮಗುವನ್ನು ತೋಳ ಉಳಿಸಿರಲು ಸಾಧ್ಯವೇ ಇಲ್ಲ. ಪುನಃ ಹೆಂಡತಿಯ ಹತ್ತಿರ ಬಂದ. ಅವಳಿಗೆ ಇನ್ನೂ ಪ್ರಜ್ಞೆ ಬಂದಿರಲಿಲ್ಲ.

ರಸ್ತೆಗೆ ಅಡ್ಡಲಾಗಿ ದೊಡ್ಡ ಮರ ಬಿದ್ದಿತ್ತು. ಮೊದಲು ಬೈಕನ್ನು ಪಕ್ಕದಲ್ಲಿದ್ದ ಜಾಗದಿಂದ ನುಗ್ಗಿಸಿದ. ನಂತರ ಹೆಂಡತಿಯನ್ನು ಎತ್ತಿಕೊಂಡು ಆ ಬೈಕ್ ಹತ್ತಿರ ಬಂದ.

ಬೈಕ್ ಸ್ಟಾರ್ಟ್ ಮಾಡಿ ಪ್ರಜ್ಞೆ ಇಲ್ಲದಿರುವ ಹೆಂಡತಿಯನ್ನು ಕೂರಿಸಿಕೊಂಡು ಅಲ್ಲಿಂದ ಹೊರಟ. ಇನ್ನು ಈ ಊರಿನ ಋಣ ಮತ್ತು ಸಂಬಂಧ ಮುಗಿಯಿತು ಎಂದುಕೊಂಡ.

ಮಳೆ ಸುರಿಯುತ್ತಿದೆ! ಆದರೂ ಸಹ ನೆನೆಯುತ್ತಲೇ ತನ್ನ ಮನೆಯ ಕಡೆ ಬರಬರನೆ ನಡೆಯುತ್ತಿದ್ದಾನೆ ರುದ್ರನಾಗ! ತಂಗಿಯನ್ನು ನೋಡುವ ಆತುರ! ಪಾಪ... ಚೊಚ್ಚಲ ಹೆರಿಗೆಗೆಂದು ಬಂದಿರುವ ತನ್ನ ತಂಗಿಯ ಹತ್ತಿರ ಇನ್ನಾದರೂ ಇರಬೇಕು. ಮನೆಯ ಹತ್ತಿರ ಬಂದ.

ಮುಂಬಾಗಿಲು ತೆರೆದಿದೆ. ರುದ್ರನಾಗನಿಗೆ ಕೋಪ ಬಂದಿತು. ಛೇ... ಛೇ... ಇದೇನಿದು ತುಂಗ ಈ ರೀತಿ ಬಾಗಿಲು ತೆರೆದು ಮಲಗಿದ್ದಾಳೆ ಎಂದುಕೊಂಡು ಒಳಗೆ ಬಂದ. ಕತ್ತಲು ಅಡರಿಕೊಂಡಿದೆ. ದೀಪವನ್ನು ಸಹ ಹಚ್ಚಲಾರದಂತಹ ಸೋಮಾರಿಯಾದಳೆ ಇವಳು ಎಂದುಕೊಂಡು 'ತುಂಗ... ಏ ತುಂಗ...' ಎಂದು ಕೂಗಿದ.

ಅವನ ಕಾಲಿಗೆ ಏನೋ ತಗುಲಿತು. ದೇಹ... ರಕ್ತ...!

ಬೆಚ್ಚಿಬಿದ್ದು ಹಿಂದೆ ಸರಿದ. ಆತುರದಿಂದ ಜೇಬಿನಿಂದ ಬೆಂಕಿಪೊಟ್ಟಣವನ್ನು ಹೊರ ತೆಗೆದು ಕಡ್ಡಿ ಗೀರಿ ಗೋಡೆಯಲ್ಲಿದ್ದ ಲ್ಯಾಂಪ್ ಅನ್ನು ಹತ್ತಿಸಿದ. ದೀಪದ ಬೆಳಕಿನಲ್ಲಿ ಕಂಡಿತು ಆ ದೃಶ್ಯ. ರಕ್ತ ಕಾರಿಕೊಂಡು ಸತ್ತಿರುವ ಹೆಂಡತಿ, ಮಕ್ಕಳು!

ಮಾನಸಿಕ ಆಘಾತ. ಎದೆಯೇ ಬಿರಿಯುವಂತಹ ಯಾತನೆ ಆಗುತ್ತಿದೆ. ಮನೆಯೇ ಕಣ್ಣುಗಳ ಮುಂದೆ ಚಕ್ರದ ರೀತಿ ತಿರುಗುತ್ತಿರುವ ಭ್ರಮೆ. ನೆಲಕ್ಕೆ ಕುಸಿಯಲಾರಂಭಿಸಿದ. ಮುಖದ ಮೇಲೆ ನೀರಿನ ಹನಿಗಳು ಬಿದ್ದು ಶೀತಲತೆಯನ್ನು ಉಂಟು ಮಾಡಿತು.

ರುದ್ರನಾಗ ಕಣ್ಣುಗಳನ್ನು ತೆರೆದ. ಹತ್ತಾರು ಮಂದಿ ಸೇರಿದ್ದಾರೆ. ಅವರ ನಡುವೆ ಮದಂತ. ಮದಂತ ಮಗುವನ್ನು ಎತ್ತಿಕೊಂಡು ಅದಕ್ಕೆ ಲೋಟದಿಂದ ಹಾಲನ್ನು ಕುಡಿಸುತ್ತಿದ್ದಾನೆ. ಮದಂತ ಅಳುತ್ತಿದ್ದಾನೆ. ರಕ್ತ ಕಾರಿಕೊಂಡು ಸತ್ತಿರುವವರನ್ನು ಕಂಡ ಕೂಡಲೇ ಅವನಿಗೆ ಅರಿವಾಗಿತ್ತು.

ಕ್ಷುದ್ರಶಕ್ತಿಗಳಿಗೆ ಬಲಿಯಾಗಿದ್ದಾರೆ. ಸುತ್ತಮುತ್ತಲಿನ ಹತ್ತಾರು ಪ್ರಾಂತ್ಯಗಳಲ್ಲಿ ಈ ವಿದ್ಯೆ ತಿಳಿದಿರುವವರು ರುದ್ರನಾಗ ಮತ್ತು ಅವನ ಶಿಷ್ಯ. ಮದಂತನಿಗೆ ಗೊಂದಲ... ಗಾಬರಿ ಆಗುತ್ತಿದೆ. ಇದು ಹೇಗೆ ಆಯಿತು? ಅವನಿಗೆ ನೆನಪಾಯಿತು. ಎರಡು ಹೆಣ್ಣು ಮತ್ತು ಒಂದು ಗಂಡಿನ ಗೊಂಬೆ ಮಾಡಲಾಗಿತ್ತು.

ಇಲ್ಲಿ ಸತ್ತಿರೋದು ಗುರು ಮಾಂತ್ರಿಕನ ಹೆಂಡತಿ, ಮಗಳು ಮತ್ತು ಮಗ. ತಲೆ ಸಿಡಿಯುತ್ತಿದೆ ಮದಂತನಿಗೆ. ಈಗಲೂ ಸಹ ಅರ್ಥವಾಗುತ್ತಿಲ್ಲ ಅವನಿಗೆ.

ರುದ್ರನಾಗನೇ ತಲೆಯ ಕೂದಲು, ಉಗುರು ಮತ್ತು ಹೆಜ್ಜೆ ಮಣ್ಣನ್ನು ನೀಡಿ ಕ್ರೂರ ಕ್ಷುದ್ರಶಕ್ತಿಗಳನ್ನೇ ಪ್ರಯೋಗಿಸಲು ಹೇಳಿದ್ದ. ಆದರೆ... ಆದರೆ ತನ್ನ ಹೆಂಡತಿ ಮತ್ತು ಮಕ್ಕಳ ಮೇಲೆ ರುದ್ರನಾಗನೇ ಪ್ರಯೋಗ ಮಾಡಿಸಲು ಸಾಧ್ಯವೇ?

ಏನೋ... ಏನೋ ಮೋಸ ನಡೆದಿದೆ. ಅದು ಏನು ಅಂತ ರುದ್ರನಾಗನೇ ಹೇಳಬೇಕು. ರುದ್ರನಾಗ ಕಂಬನಿ ಮಿಡಿಯುತ್ತಾ ಹೆಣಗಳನ್ನೇ ನೋಡುತ್ತಿದ್ದಾನೆ. ಜನಗಳು ಅನುಕಂಪ ವ್ಯಕ್ತಪಡಿಸುತ್ತಿಲ್ಲ. ರುದ್ರನಾಗನನ್ನು ನಿಂದಿಸುತ್ತಿದ್ದಾರೆ. ಆದರೆ ಧ್ವನಿ ಹೊರ ಬರುತ್ತಿಲ್ಲ. ದುಡ್ಡಿನ ದುರಾಸೆಯಿಂದ ಎಷ್ಟೋ ಸಂಸಾರಗಳನ್ನು ಬಲಿ ತೆಗೆದುಕೊಂಡಿದ್ದ ರುದ್ರನಾಗ. ಈಗ ಅವನ ಸಂಸಾರ ನಾಶಗೊಂಡಿದೆ. ಉಪ್ಪನ್ನು ತಿಂದ ಮೇಲೆ ನೀರು ಕುಡಿಯಲೇಬೇಕು.

ರುದ್ರನಾಗನಿಗೆ ಗೊತ್ತಾಗಿ ಹೋಯಿತು. ಕ್ಷುದ್ರಶಕ್ತಿಗಳು ರಕ್ತ ಹೀರಿ ಪ್ರಾಣ ತೆಗೆದಿವೆ. ಎಂತಹ ವಿಪರ್ಯಾಸ. ರುದ್ರನಾಗನಿಗೆ ನೆನಪಾಯಿತು. ತಂಗಿಯ ಗಂಡ ಏನೋ ಕತೆ ಹೇಳಿ ಕೈಕರಣ ಮಾಡಲು ಉಗುರು, ತಲೆಯ ಕೂದಲು, ಹೆಜ್ಜೆ ಮಣ್ಣನ್ನು ನೀಡಿದ್ದ. ಅದನ್ನು ಉಪಯೋಗಿಸಿ ಶಕ್ತಿ ಪ್ರಯೋಗಿಸಿದ್ದ. ಕೋಪ ಭುಗಿಲೆದ್ದಿತು.

ಅಂದರೆ... ಅಂದರೆ... ನನ್ನ ಹೆಂಡತಿ, ಮಕ್ಕಳ ತಲೆಯ ಕೂದಲು, ಉಗುರು, ಹೆಜ್ಜೆ ಮಣ್ಣನ್ನು ನನಗೆ ನೀಡಿ ನನ್ನಿಂದಲೇ ಕೈಕರಣ ಮಾಡಿಸಿದ್ದಾನೆ. ಆದರೆ ಹೀಗೇಕೆ ಮಾಡಿದ?

(ಸಶೇಷ)